# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.78/2019

**P.W.-01**
**C.W.-01**

| | | |
|---|---|---|
| ಹೆಸರು | : | ಡಿ. ನಿಂಗರಾಜು |
| ತಂದೆಯ ಹೆಸರು | : | ದೊಡ್ಡಮಾದಯ್ಯ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಸಮಾಜ ಸೇವಕ |
| ವಾಸಸ್ಥಳ | : | ಟೀ.ನರಸೀಪುರ |

ದಿನಾಂಕಃ11-03-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಪರಿಚಯ ನನಗೆ ಇರುತ್ತದೆ. ಆರೋಪಿಯು 2018 ನೇ ಇಸವಿಯಲ್ಲಿ ಸಿದ್ದಲಿಂಗಪುರ ವೃತ್ತದ ಕೆಸರೆ ಗ್ರಾಮಪಂಚಾಯಿತಿಯಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

2. 2018 ನೇ ಇಸವಿಯಲ್ಲಿ ನಾನು ಆರೋಪಿಯನ್ನು ಆತನ ಕಛೇರಿಯಲ್ಲಿ ಬೇಟಿ ಮಾಡಿದ್ದೇನೆ. ಕೆಸರೆ ಗ್ರಾಮದ ಸರ್ವೆ ನಂ.610/4 ರಲ್ಲಿರುವ 1 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಭೂಪರಿವರ್ತಿನೆಗಾಗಿ ನಾನು ಆರೋಪಿಯನ್ನು ಬೇಟಿ ಮಾಡಿರುತ್ತೇನೆ. ಸದರಿ ಜಮೀನು ಚಾಸಾ-5 ರವರ ಹೆಸರಿನಲ್ಲಿರುತ್ತದೆ. ಸದರಿ ಜಮೀನನ್ನು ಭೂಪರಿವರ್ತನೆ ಮಾಡಿಸಿಕೊಡಲು ಚಾಸಾ-5 ರವರು 2018 ನೇ ಇಸವಿಯಲ್ಲಿ ನನಗೆ ಒಂದು GPA ಯನ್ನು ನೀಡಿದ್ದರು. ಸಾಕ್ಷಿಯು ಸದರಿ GPA ಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ GPA ಯನ್ನು ನಿಪಿ-1 ಎಂದುಗುರುತಿಸಲಾಯಿತು. ನಿಪಿ-1 ರಲ್ಲಿ ತನ್ನ ಸಹಿ ಇಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

3. ಆರೋಪಿಯನ್ನು ನಾನು ಸದರಿ ಭೂಪರಿವರ್ತನೆ ವಿಚಾರವಾಗಿ ಬೇಟಿ ಮಾಡಲು ಹೋದಾಗ, ಆರೋಪಿಯು ನನ್ನ ಬಳಿ 50,000/- ರೂ.ಗಳ ಲಂಚವನ್ನು ಕೊಡಲು

ಒತ್ತಾಯಿಸಿದನು. ನಾನು ಆಗ ಆರೋಪಿಗೆ ಮುಂಗಡವಾಗಿ 15,000/- ರೂ.ಗಳ ಲಂಚದ ಹಣವನ್ನು ನೀಡಿರುತ್ತೇನೆ. 2 ದಿನಗಳ ನಂತರ ನಾನು 35,000/- ರೂ.ಗಳನ್ನು ತೆಗೆದುಕೊಂಡು ಆರೋಪಿಯನ್ನು ಬೇಟಿ ಮಾಡಲು ಹೋದೆನು. ಆರೋಪಿಯು ನನ್ನಿಂದ ಸದರಿ 35,000/- ರೂ.ಗಳನ್ನು ಸ್ವೀಕರಿಸಿದನು.

4. ಆರೋಪಿಯು ನನ್ನಿಂದ ಲಂಚ ಪಡೆದ ಬಗ್ಗೆ ನಾನು ಎಸಿಬಿ ಪೋಲೀಸರನ್ನು ಬೇಟಿ ಮಾಡಿ, ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-2 ಎಂದು, ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ನಿಪಿ-2 ರೊಂದಿಗೆ ನಾನು ಆರೋಪಿಯೊಂದಿಗೆ ರೆಕಾರ್ಡ್ ಮಾಡಿಕೊಂಡದ್ದ ಮೊಬೈಲನ್ನು ಎಸಿಬಿ ಪೋಲೀಸರ ಮುಂದೆ ಹಾಜರುಪಡಿಸಿದೆನು. ಮೊಬೈಲಿನಲ್ಲಿದ್ದ ಸಂಭಾಷಣೆಯನ್ನು ಎಸಿಬಿ ಪೋಲೀಸರು ಲಿಖಿತ ರೂಪಕ್ಕೆ ಇಳಿಸಿದರು.

6. ನಾನು ಎಸಿಬಿ ಪೋಲೀಸರ ಮುಂದೆ 35,000/- ರೂ.ಗಳನ್ನು ಹಾಜರುಪಡಿಸಿದೆನು. ಯಾವ ಮುಖಬೆಲೆಯ ಎಷ್ಟು ನೋಟುಗಳನ್ನು ಹಾಜರುಪಡಿಸಿದೆನು ಎಂದು ನನಗೆ ನೆನಪಿರುವುದಿಲ್ಲ. ಎಸಿಬಿ ಪೋಲೀಸರು ಸ್ಥಳಕ್ಕೆ ಮೂರು ಜನ ಪಂಚಸಾಕ್ಷಿಗಳನ್ನು ಬರಮಾಡಿಕೊಂಡಿದ್ದರು. ಸದರಿ ನೋಟುಗಳನ್ನು ಎಸಿಬಿ ಪೋಲೀಸರು ಪಂಚಸಾಕ್ಷಿಗಳಿಗೆ ಕೊಟ್ಟರು. ನಂತರ ಸದರಿ ನೋಟುಗಳಿಗೆ ಪೌಡರನ್ನು ಹಚ್ಚಿದರು. ಪಂಚಸಾಕ್ಷಿಗಳ ಕೈಗಳನ್ನು ಎಸಿಬಿ ಪೋಲೀಸರು ದ್ರವಣದಲ್ಲಿ ತೊಳೆಸಿದರು. ಸದರಿ ದ್ರವಣದ ಬಣ್ಣ ಬದಲಾಯಿತು. ಸದರಿ ದ್ರವಣವನ್ನು ಬಾಟಲಿಗೆ ಹಾಕಿ ಸೀಲ್ ಮಾಡಲಾಯಿತು. ಸದರಿ ದ್ರವಣವನ್ನು ಮು.ಮಾ-1 ಎಂದು ಗುರುತಿಸಲಾಯಿತು.

7. ಸದರಿ ನೋಟುಗಳ ಸಂಖ್ಯೆಗಳನ್ನು ಬೆರಳಚ್ಚು ಮಾಡಲಾಯಿತು. ಎಸಿಬಿ ಪೋಲೀಸರು ನನ್ನ ಕೈಗೆ ಸದರಿ ಹಣವನ್ನು ಕೊಟ್ಟರು. ಸ್ಥಳದಲ್ಲಿ ಪೋಟೊ ಹಾಗೂ ವೀಡಿಯೋಗಳನ್ನು ತೆಗೆಯಲಾಯಿತು. ಪ್ರಾಯೋಗಿಕ ಪಂಚನಾಮೆಯಲ್ಲಿ ತೆಗೆದ ಪೋಟೋಗಳನ್ನು ನಿಪಿ-3 ರಿಂದ 12 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಂದು ಪಂಚನಾಮೆಯನ್ನು

ತಯಾರಿಸಲಾಯಿತು. ಸದರಿ ಪಂಚನಾಮೆಯನ್ನು ನಿಪಿ-13 ಎಂದು, ನಿಪಿ-13 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

8. ನಂತರ ನಾವು ನಜರ್ ಬಾದ್‌ನ ಬಳಿ ಇರುವ ಕಂದಾಯ ಇಲಾಖೆಯ ಬಳಿ ಬಂದೆವು. ಆರೋಪಿಯ ಕಛೇರಿಯ ಒಳಗೆ ನಾನು ಹಾಗೂ ಪಂಚಸಾಕ್ಷಿಗಳು ಹೋದೆವು. ಆರೋಪಿಯು ಕಛೇರಿ ಒಳಗೆ ಹೋದರು. ಆರೋಪಿ ಕಛೇರಿ ಒಳಗೆ ಇದ್ದನು. ಆರೋಪಿಗೆ ನಾನು ನನ್ನ ಬಳಿ ಇದ್ದ 35,000/- ರೂ.ಹಣವನ್ನು ಕೊಟ್ಟೆನು. ಆರೋಪಿಯು ನನ್ನಿಂದ ಹಣವನ್ನು ಪಡೆದು ಪ್ಯಾಂಟ್ ಜೇಬಿಗೆ ಹಾಕಿಕೊಂಡನು. ನಂತರ ನಾನು ಆರೋಪಿಯು ಹಣವನ್ನು ಸ್ವೀಕರಿಸಿದ ಬಗ್ಗೆ ಪಂಚಸಾಕ್ಷಿಗಳಿಗೆ ತಿಳಿಸಿದೆನು. ನಂತರ ಪಂಚಸಾಕ್ಷಿಗಳು ಸದರಿ ವಿಚಾರವನ್ನು ಎಸಿಬಿ ಪೋಲೀಸರಿಗೆ ತಿಳಿಸಿದರು. ನಂತರ ಎಸಿಬಿ ಪೋಲೀಸರು ಸ್ಥಳಕ್ಕೆ ಬಂದು ಆರೋಪಿಯನ್ನು ವಿಚಾರಣೆ ಮಾಡಿದರು. ಆರೋಪಿಯನ್ನು ಪಂಚಸಾಕ್ಷಿಗಳು ತೋರಿಸಿದರು. ಎಸಿಬಿ ಪೋಲೀಸರು ಆರೋಪಿಯ ಪ್ಯಾಂಟಿನಿಂದ ಹಣವನ್ನು ತೆಗೆದುಕೊಂಡರು. ಎಸಿಬಿ ಪೋಲೀಸರು ಸದರಿ ಹಣವನ್ನು ಎಣಿಸಿ ಅಮಾನತ್ತುಪಡಿಸಿಕೊಂಡರು. ಸ್ಥಳದಲ್ಲಿ ಎಸಿಬಿ ಪೋಲೀಸರು ತನಿಖೆಯನ್ನು ಪ್ರಾರಂಭಿಸಿದರು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -</u>

9. ನಿಪಿ-2 ರಲ್ಲಿ ಕೆಸರೆ ಗ್ರಾಮದ ಸರ್ವೆ ನಂ.610/4 ಮತ್ತು 610/6 ರಲ್ಲಿ ಒಟ್ಟು 1 ಎಕರೆ 30 ಗುಂಟೆ ಜಮೀನು ಇರುವುದಾಗಿ ನಮೂದಿಸಿರುತ್ತೇನೆ ಎಂದರೆ ಸರಿ.

10. ದಿಃ13-07-2017 ರಂದು ಆರೋಪಿಯು ನನ್ನ ಮೊಬೈಲಿಗೆ ಫೋನ್ ಮಾಡಿ, 40,000/- ರೂ.ಗಳ ಲಂಚಕ್ಕೆ ಒತ್ತಾಯ ಮಾಡಿರುತ್ತಾರೆ ಹಾಗೂ ನಾನು 30,000/- ರೂ.ಗಳನ್ನು ಕೊಡಲು ಒಪ್ಪಿಕೊಂಡೆನು ಎಂದರೆ ಸರಿ. ನನ್ನ ಹಾಗೂ ಆರೋಪಿಯ ಮದ್ಯೆ ನಡೆದ ಸಂಭಾಷಣೆಯನ್ನು ನನ್ನ ಮೊಬೈಲ್ ಫೋನಿನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

11. ನನ್ನ ಬಳಿ ಇದ್ದ 500/- ರೂ.ಗಳ 32 ನೋಟು ಹಾಗೂ 2000/- ರೂ.ಗಳ 7 ನೋಟುಗಳನ್ನು ನಾನು ಎಸಿಬಿ ಪೋಲೀಸರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಎಸಿಬಿ

ಪೋಲೀಸರು ಚಾಸಾ-2 ಹಾಗೂ 3 ರವರನ್ನು ಬರಮಾಡಿಕೊಂಡರು ಎಂದರೆ ಸರಿ. ಎಸಿಬಿ ಪೋಲೀಸರು ಸದರಿ ಹಣವನ್ನು ಚಾಸಾ-2 ರವರಿಗೆ ಕೊಟ್ಟು, ಚಾಸಾ-2 ರವರು ಸದರಿ ನೋಟುಗಳ ಸಂಖ್ಯೆಗಳನ್ನು ಹೇಳಿದ ಮೇರೆಗೆ ಚಾಸಾ-3 ರವರು ಸದರಿ ನೋಟುಗಳ ಸಂಖ್ಯೆಗಳನ್ನು ಬಿಳಿಹಾಳೆಯಲ್ಲಿ ಬರೆದುಕೊಂಡರು ಎಂದರೆ ಸರಿ. ಚಾಸಾ-2 ಸದರಿ ನೋಟುಗಳನ್ನು ನನ್ನ ಶರ್ಟಿನ ಬಲಭಾಗದ ಜೇಬಿಗೆ ಇಟ್ಟರು ಎಂದರೆ ಸರಿ. ಎಸಿಬಿ ಪೋಲೀಸರು ಸದರಿ ನೋಟುಗಳಿಗೆ ಫಿನಾಪ್ತಲಿನ್ ಪೌಡರ್ ನ್ನು ಹಚ್ಚಿದರು ಎಂದರೆ ಸರಿ. ಆರೋಪಿಯು ಹಣವನ್ನು ಕೇಳಿದರೆ ಮಾತ್ರ ಕೊಡಬೇಕು, ಹಣವನ್ನು ಪಡೆದುಕೊಂಡ ನಂತರ ತಲೆಯನ್ನು ಸವರುವ ಮೂಲಕ ಸೂಚನೆಯನ್ನು ನೀಡಬೇಕು ಎಂದು ನನಗೆ ಎಸಿಬಿ ಪೋಲೀಸರು ತಿಳಿಸಿದರು ಎಂದರೆ ಸರಿ. ನಂತರ ನಾವು ಎಲ್ಲರೂ ಮಿನಿವಿಧಾನಸೌದದಲ್ಲಿರುವ ಭೂಕಂದಾಯ ಕಛೇರಿಗೆ ಹೋದೆವು ಎಂದರೆ ಸರಿ. ಆರೋಪಿಯು ನನ್ನ ಬಳಿ ಇದ್ದ 30,000/- ರೂ.ಗಳನ್ನು ಪಡೆದುಕೊಂಡು ಸದರಿ ನೋಟುಗಳನ್ನು ಏಣಿಸಿ ತನ್ನ ಪ್ಯಾಂಟಿನ ಜೇಬಿಗೆ ಹಾಕಿಕೊಂಡನು ಎಂದರೆ ಸರಿ. ನಂತರ ನಾನು ಎಸಿಬಿ ಪೋಲೀಸರಿಗೆ ತಲೆಸವರುವ ಮೂಲಕ ಸೂಚನೆಯನ್ನು ನೀಡಿದೆನು ಎಂದರೆ ಸರಿ.

12. ನಂತರ ಎಸಿಬಿ ಪೋಲೀಸರು ದ್ರವಣವನ್ನು ತಯಾರಿಸಿ, ಆರೋಪಿಯ ಎಡಗೈ ತೊಳೆದಾಗ ದ್ರವಣದ ಬಣ್ಣ ಬದಲಾಯಿತು ಹಾಗೂ ಸದರಿ ದ್ರವಣವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ನಂತರ ಪೋಲೀಸರು ಆರೋಪಿಗೆ ಹಣವನ್ನು ಹಾಜರುಪಡಿಸಲು ಹೇಳಿದ ಮೇರೆಗೆ ಆರೋಪಿಯು ಸದರಿ ಹಣವನ್ನು ಹಾಜರುಪಡಿಸಿದನು ಎಂದರೆ ಸರಿ. ನಂತರ ಚಾಸಾ-1 ಸದರಿ ಹಣದ ಸಂಖ್ಯೆಗಳನ್ನು ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಬರೆದುಕೊಂಡ ಹಣದ ಸಂಖ್ಯೆಗಳೊಂದಿಗೆ ತಾಳೆಮಾಡಿದನು ಎಂದರೆ ಸರಿ.

13. ಆರೋಪಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಆರೋಪಿಯ ಪ್ಯಾಂಟಿನ ಜೇಬನ್ನು ದ್ರವಣದಲ್ಲಿ ತೊಳೆಸಲಾಯಿತು ನಂತರ ಸದರಿ ದ್ರವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು ಹಾಗೂ ಸದರಿ ದ್ರವಣವನ್ನು ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿ. ಆರೋಪಿಯ ಕಛೇರಿಯ ಒಳಗೆ ಹೋದಂತಹ ಸಂದರ್ಭದಲ್ಲಿ ಒಂದು ವಾಯ್ಸ್ ರೆಕಾರ್ಡರ ನ್ನು ನೀಡಲಾಯಿತು ಎಂದರೆ ಸರಿ. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಆರೋಪಿಯ ಧ್ವನಿಯನ್ನು ಚಾಸಾ-4 ಗುರುತುಹಚ್ಚಿದರು ಎಂದರೆ ಸರಿ. ಆರೋಪಿಯಿಂದ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು

ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿ. ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು( ಪುಟಸಂಖ್ಯೆಃ160 ರಿಂದ 250).

14. ಸ್ಥಳದಲ್ಲಿ ಎಸಿಬಿ ಪೋಲೀಸರು ಟ್ರ್ಯಾಪ್ ಮಹಜರನ್ನು ತಯಾರಿಸಿದರು ಹಾಗೂ ನಾನು ಸದರಿ ಮಹಜರಿಗೆ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ಸದರಿ ಟ್ರ್ಯಾಪ್ ಮಹಜರನ್ನು ನಿಪಿ-15 ಎಂದು, ನಿಪಿ-15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಆರೋಪಿಯು ಸ್ಥಳದಲ್ಲಿ ಎಸಿಬಿ ಪೋಲೀಸರಿಗೆ ತನ್ನ ಸಮಜಾಯಿಷಿಯನ್ನು ನೀಡಿರುತ್ತಾನೆ. ಸದರಿ ಸಮಜಾಯಿಷಿಯನ್ನು ನಿಪಿ-16 ಎಂದು ಗುರುತಿಸಲಾಯಿತು.

15. ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ಪೋಲೀಸರು ನನ್ನ ಮುಂದುವರೆದ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ಪೋಲೀಸರ ಮುಂದೆ "ಸರ್ವೆ ನಂ.610/4 ................ಜಮೀನನ್ನು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17 ಎಂದು ಗುರುತಿಸಲಾಯಿತು.

16. ನಾನು ಎಸಿಬಿ ಪೋಲೀಸರ ಮುಂದೆ "ದಿಃ13-07-2017 ................ ಒತ್ತಾಯಿಸಿರುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ನಾನು ಎಸಿಬಿ ಪೋಲೀಸರ ಮುಂದೆ "ನನ್ನ ಬಳಿ 30,000/- ರೂ.ಗಳ ................ ಹಾಜರುಪಡಿಸಿದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ನಾನು ಎಸಿಬಿ ಪೋಲೀಸರ ಮುಂದೆ " ಫಿನಾಪ್ತಲಿನ್ ಪೌಡರ್ ................ ನೀಡಿದರು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17(ಸಿ) ಎಂದು ಗುರುತಿಸಲಾಯಿತು. ನಾನು ಎಸಿಬಿ ಪೋಲೀಸರ ಮುಂದೆ "ರೂ. 30,000/- ................ ಇಟ್ಟುಕೊಂಡು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17(ಡಿ) ಎಂದು ಗುರುತಿಸಲಾಯಿತು. ನಾನು ಎಸಿಬಿ ಪೋಲೀಸರ ಮುಂದೆ "ಬಲಗೈ ಬೆರಳುಗಳನ್ನು ................ ಬಾಟಲಿಗೆ ಹಾಕಿ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಭಾಗವನ್ನು ನಿಪಿ-17(ಇ) ಎಂದು ಗುರುತಿಸಲಾಯಿತು.

17. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ವಿಶೇಷ ಸರ್ಕಾರಿ ಅಭಿಯೋಜಕರವರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

-